ಗಜೇಂದ್ರಗಡದ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದವರಂ ನಿವೇಶನಕ್ಕೆ ಸಲ್ಲಿಸಿದ ಅರ್ಜಿ

೩೧೨ (೩೧) ಶ್ರೀ ಜ್ಞಾನದೇವ ದೊಡ್ಡ ಮೇಟಿ (ರೋಣ).—ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ಹಾಗೂ ಗಣಿ ಮತ್ತು ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಧಾರವಾಡ ಜಿಲ್ಲೆ ರೋಣ ತಾಲ್ಲೂಕು ಗಜೇಂದ್ರಗಡದಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಕಚೇರಿಯಲ್ಲಿ ದುಡಿಯುತ್ತಿರುವ ನೇಕಾರರು ನಿವೇಶನಕ್ಕಾಗಿ ಅರ್ಜಿ ಸಲ್ಲಿಸಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು ?

ಇ) ಡಚ್ ಯೋಜನೆಯನ್ವಯ ಗಜೇಂದ್ರಗಡದಲ್ಲಿ ನೂರು ಮನೆಗಳ ನಿರ್ಮಾಣಕ್ಕಾಗಿ ಸಿದ್ಧಗೊಂಡಿದ ಯೋಜನೆ ಈಗ ಯಾವ ಹಂತದಲ್ಲಿದೆ ?

ಶ್ರೀ ರಮೇಶ್. ಸಿ. ಜಿಗಜಿಣಗಿ (ಸಣ್ಣ ಪ್ರಮಾಣದ ಕೈಗಾರಿಕಾ ಹಾಗೂ ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ಬಂದಿದೆ.

ಆ) ಗಜೇಂದ್ರಗಡದಲ್ಲಿನ ನೇಕಾರರಿಗೆ ವಾಸ ಹಾಗೂ ಕಾರ್ಯಾಗಾರ ಷೆಡ್ಡುಗಳನ್ನು ನಿರ್ಮಿಸುವ ಯೋಜನೆ ಇಲ್ಲ.

ಇ) ಉದ್ಭವಿಸುವುದಿಲ್ಲ.

ಮೀಟರ್ ರೀಡರ್ ಹುದ್ದೆಗಳನ್ನು ಭರ್ತಿಮಾಡುವ ಬಗ್ಗೆ

೩೧೩ (೬೪೯) ಶ್ರೀ ಕೆ. ವಸಂತ ಬಂಗೇರ (ಬೆಳ್ತಂಗಡಿ).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:—

ಅ) ಕರ್ನಾಟಕ ರಾಜ್ಯದಲ್ಲಿ ಸಾವಿರಾರು ಉದ್ದಿಮೆಗಳು ಹಾಗೂ ಇನ್ನಿತರರು ವಿದ್ಯುಚ್ಛಕ್ತಿಯನ್ನು ಕದ್ದು ಬಳಸುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅವರ ವಿರುದ್ಧ ಏನು ಕ್ರಮ ಕೈಗೊಳ್ಳಲಾಗಿದೆ ? ಅಲ್ಲದೆ ಇನ್ನು ಮುಂದೆ ಈ ರೀತಿ ಕದ್ದು ಬಳಸದಂತೆ ಏನು ಕ್ರಮ ಕೈಗೊಳ್ಳಲಾಗುವುದು ?

ಆ) ಕರ್ನಾಟಕ ರಾಜ್ಯದ ಹೆಚ್ಚಿನ ಎಲ್ಲಾ ಕಡೆ ಮೀಟರ್ ರೀಡಿಂಗ್ ಅನ್ನು ತಿಂಗಳಿಗೊಮ್ಮೆ ಅಥವಾ ಒಂದು ವರ್ಷಕ್ಕೊಮ್ಮೆ ಮಾಡುತ್ತಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಕಾರಣಗಳೇನು ?

ಇ) ಮೀಟರು ರೀಡರುಗಳ ಹುದ್ದೆಗಳನ್ನು ತಕ್ಷಣ ಭರ್ತಿ ಮಾಡಿ ಈ ತೊಂದರೆಯಿಂದ ಜನರನ್ನು ಪಾರು ಮಾಡಲಾಗುವುದೇ ?

ಈ) ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಇಲಾಖೆಯವರು ಡಿಪಾಸಿಟ್ ಮಾಡುವಂತೆ ಜನರನ್ನು ಬಲವಂತ ಮಾಡುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದರೆ ಬಲವಂತ ಮಾಡುವುದನ್ನು ತಕ್ಷಣ ನಿಲ್ಲಿಸಲು ಕ್ರಮ ಕೈಗೊಳ್ಳುವಿರಾ ?

ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಗ್ರಾಹಕರು ವಿದ್ಯುತ್ ಕದ್ದು ಬಳಸುತ್ತಿರುವ ಸಂಗತಿ ಅಂತಹ ಸ್ಥಾವರಗಳನ್ನು ಅನಿರೀಕ್ಷಿತವಾಗಿ ತನಿಖೆ ಮಾಡಿದಾಗಲೇ ಗೊತ್ತಾಗುವುದು. ವಿದ್ಯುತ್ ಕಳ್ಳತನ ಗುರುತಿಸಿದ ಕೂಡಲೇ ಕಳ್ಳತನ ಪ್ರಮಾಣ ಅಂದಾಜು ಮಾಡಿ ಹಿಂಬಾಕಿ ಬಿಲ್ಲು ನಿಗದಿ ಪಡಿಸಿ ಮಂಜೂರಾತಿಯ ನಿಯಮದಂತೆ ಹಣ ವಸೂಲಿ ಮಾಡಲಾಗುತ್ತದೆ. ಅಪರಾಧ ಗುರುತಿಸಬಹುದಾಗಿದ್ದ ಪಕ್ಷದಲ್ಲಿ ಅವರ ಮೇಲೆ ನ್ಯಾಯಾಲಯದಲ್ಲಿ ಮೊಕದಮ್ಮೆ ಹೂಡಲಾಗುತ್ತದೆ.